ಬ್ಯಾಂಕಾಕ್

# ತೇಲುವ ಮಾರುಕಟ್ಟೆ!



**ನೆಲದ ಮೇಲೆ ವ್ಯಾಪಾರ ನಡೆಯುವ ಮಾರುಕಟ್ಟೆ ಎಲ್ಲರಿಗೂ ಗೊತ್ತು. ಆದರೆ ನೀರ ಮೇಲೆ ತೇಲುವ ಮಾರುಕಟ್ಟೆ ಬಗ್ಗೆ..? ಬ್ಯಾಂಕಾಕ್‌ನಿಂದ ಸುಮಾರು ನೂರು ಕಿ.ಮೀ ದೂರವಿರುವ ಫ್ಲೋಟಿಂಗ್ ಮಾರ್ಕೆಟ್‌ಗೆ ದೋಣಿಯಲ್ಲಿ ಹೋಗಿ, ಚೌಕಾಸಿ ಮಾಡುತ್ತ ಖರೀದಿಸುವುದೆಂದರೆ ಸಾಮಾನ್ಯ ಸಂಗತಿಯೇ?!**

ಚಿತ್ರ-ಲೇಖನ:
**ಸೀಮಾ ಜಿ ಪ್ರಸಾದ್**

ಮುಂಜಾನೆ 6.15ಕ್ಕೆ ಬ್ಯಾಂಕಾಕ್‌ನ ಸುವರ್ಣಭೂಮಿ ವಿಮಾನ ನಿಲ್ದಾಣದಲ್ಲಿ ಇಳಿದಾಗ ಸುತ್ತಲೂ ಮಂಜು ಕವಿದಿತ್ತು. ಅಪರಿಚಿತ ನಾಡಿನಲ್ಲಿ ಸಣ್ಣಗೆ ಮೂಡುತ್ತಿದ್ದ ಸೂರ್ಯ, ಶುಭೋದಯ ಹೇಳಿದಂತೆ ಭಾಸವಾಯಿತು.

ಏನಿದೆ, ಬ್ಯಾಂಕಾಕ್‌ನಲ್ಲಿ? ಪ್ರವಾಸಿ ಪರಿಚಯ ಕರಪತ್ರ ಓದುತ್ತ ಅಕ್ಕಪಕ್ಕ ನೋಡುತ್ತಿದ್ದಂತೆ ದೈತ್ಯಾಕಾರದ ಕಟ್ಟಡ, ಮೆಟ್ರೋ ಹಾಗೂ ಸ್ಕೈಲೈನ್ ಟ್ರೈನ್, ಬುದ್ಧನ ದೇವಾಲಯ... ಇತ್ಯಾದಿ. ಬೃಹತ್ ಮಾರುಕಟ್ಟೆಗಳಾದ ಚತೂಚತ್, ಎಮ್‌ಬಿಕೆ, ಫಾರ್ಚ್ಯೂನ್ ಐ.ಟಿ ಮತ್ತಿತರ ಮಾಲ್‌ಗಳು ಹಾಗೂ ಚೊಪ್ರ್ಯ ನದಿ ಇವೆಲ್ಲಾ ಸಿರಿವಂತಿಕೆಯ ಬ್ಯಾಂಕಾಕ್‌ನ ಮುಖ್ಯ ಆಕರ್ಷಣೆಗಳ ಪಟ್ಟಿ.

'ಬ್ಯಾಂಕಾಕ್‌ನ ಹಳ್ಳಿಗರನ್ನು ಮತ್ತು ಅವರ ಸಂಸ್ಕೃತಿಯನ್ನು ಬಿಂಬಿಸುವ ಫ್ಲೋಟಿಂಗ್ ಮಾರುಕಟ್ಟೆಯನ್ನು ನೀವು ನೋಡಲೇಬೇಕು' ಎಂದು ಥಾಯ್ ಗೆಳತಿ ಯೋಕ್ ಹೇಳಿದಳು. 'ಅದೇನದು ತೇಲುವ ಮಾರುಕಟ್ಟೆ! ಇಡೀ ಮಾರುಕಟ್ಟೆ ನೀರಿನಲ್ಲಿದೆಯೆ?' ಎನ್ನುವ ನನ್ನ

